ಷಿಫ್ಟ್ ಮಾಡತಕ್ಕ ಕೆಲಸವನ್ನು ನಾವು ಮಾಡುತ್ತೇವೆ.

ಶ್ರೀ ಸುಭಾಶ್ ಕಲ್ಲೂರು: ಅಲ್ಲಿ ಇನ್ನೂ ಸೈಟ್ ಪ್ಲಾಟ್‌ಗಳು ಇವೆ. ಬಹಳಷ್ಟು ಜನ ದುಡ್ಡು ತುಂಬಿದ್ದಾರೆ, ಅವರಿಗೆ ಸೈಟ್ ಒದಗಿಸಿಲ್ಲ. ಆದ್ದರಿಂದ, ಉಳಿದಂಥ ರೈತರಿಗೆ ಅಥವಾ ಮಾರತಕ್ಕ ಲೈಸೆನ್ಸ್‌ದಾರರಿಗೆ ಸೈಟ್ ಕೊಡತಕ್ಕ ವ್ಯವಸ್ಥೆ ಮಾಡಬೇಕು.

ಶ್ರೀ ಆರ್. ಬಿ. ತಿಮ್ಮಾಪುರ: ಅದನ್ನು ನಾವು ಶೀಘ್ರದಲ್ಲೇ ಮಾಡುತ್ತೇವೆ.

ಆ) ತಡೆಹಿಡಿಯಲಾದ ಪ್ರಶ್ನೆಗಳು

ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಲೆಕ್ಕ ಪರಿಶೋಧನೆ

9(197)

ಶ್ರೀ ಜಗದೀಶ್ ಶೆಟ್ಟರ್(ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟಗಳ ಲೆಕ್ಕ ಪರಿಶೋಧನೆಯು ಯಾವಾಗಿನಿಂದ ನಡೆದಿರುವುದಿಲ್ಲ? (ಜಿಲ್ಲಾವಾರು ವಿವರ ಸಲ್ಲಿಸುವುದು).

ಆ) ಅದಕ್ಕೆ ಕಾರಣಗಳೇನು?

ಇ) ಷೇರುದಾರರಿಗೆ ಡಿವಿಡೆಂಡನ್ನು ಯಾವಾಗಿನಿಂದ ಪಾವತಿಸಿರುವುದಿಲ್ಲ?

ಈ) ಹಾಗಿದ್ದಲ್ಲಿ ಕಾರಣವೇನು?

ಶ್ರೀ ಡಿ. ಕೆ. ಶಿವಕುಮಾರ್ (ಸಹಕಾರ ಸಚಿವರು):

ಅ) ರಾಜ್ಯದಲ್ಲಿ ಒಟ್ಟು 13 ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟಗಳು ಕಾರ್ಯ ನಿರ್ವಹಿಸುತ್ತಿದ್ದು, ಈ ಪೈಕಿ ಕೆಳಕಂಡಂತೆ 6 ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟಗಳ ಲೆಕ್ಕ ಪರಿಶೋಧನೆಯು 1998-99ರವರೆಗೆ ನಡೆದಿರುತ್ತದೆ.

1) ಬೆಂಗಳೂರು ನಗರ ಹಾಗೂ ಗ್ರಾಮಾಂತರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ., ಬೆಂಗಳೂರು.

2) ಶಿವಮೊಗ್ಗ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ., ಶಿವಮೊಗ್ಗ.

3) ದಕ್ಷಿಣ ಕನ್ನಡ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ., ಮಂಗಳೂರು.

4) ಹಾಸನ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ., ಹಾಸನ.

5) ಬಿಜಾಪುರ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ., ಬಿಜಾಪುರ.

6) ರಾಯಚೂರು-ಬಳ್ಳಾರಿ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ., ಬಳ್ಳಾರಿ.

ಇನ್ನುಳಿದ 7 ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟಗಳ ಲೆಕ್ಕಪರಿಶೋಧನೆಯು ಕೆಳಕಂಡ ಅವಧಿಗೆ ಬಾಕಿ ಇರುತ್ತದೆ.

1)	ಕೋಲಾರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ., ಕೋಲಾರ.	1996-97 ರಿಂದ 1998-99
2)	ತುಮಕೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ., ತುಮಕೂರು	1996-97 ರಿಂದ 1998-99
3)	ಮೈಸೂರು ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ., ಮೈಸೂರು.	1996-97 ರಿಂದ 1998-99
4)	ಮಂಡ್ಯ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ., ಮಂಡ್ಯ.	1995-96 ರಿಂದ 1998-99
5)	ಬೆಳಗಾಂ ಜಿಲ್ಲಾಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ., ಬೆಳಗಾಂ.	1997-98 ರಿಂದ 1998-99
6)	ಧಾರವಾಡ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ., ಧಾರವಾಡ.	1997-98 ರಿಂದ 1998-99

7) ಗುಲ್ಬರ್ಗಾ ಸಹಕಾರಿ ಹಾಲು ಉತ್ಪಾದಕರ ಸಂಘ ನಿ., ಗುಲ್ಬರ್ಗಾ. 1998-99

ಆ) ಮೇಲಿನ ಪ್ರಶ್ನೆ (ಅ)ದಲ್ಲಿ ವಿವರಿಸಿರುವಂತೆ ಲೆಕ್ಕ ಪರಿಶೋಧನೆಯಾಗದೇ ಇರುವುದರ ಬಗ್ಗೆ ಕಾರಣಗಳನ್ನು ಕೆಳಕಂಡಂತೆ ವಿವರಿಸಲಾಗಿದೆ.

1) ಕೋಲಾರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ., ಕೋಲಾರದಲ್ಲಿರುವ ನಿಯಮ 441ರ ಇಲಾಖಾ ಆಡಿಟರ್ ಹುದ್ದೆಯು ಮಾರ್ಚ್ 99ರವರೆಗೆ ಖಾಲಿ ಇದ್ದುದರಿಂದ 1996-97 ರಿಂದ 1998-99 ಈ ಸಾಲುಗಳ ಆಡಿಟ್ ಬಾಕಿ ಇರುತ್ತದೆ.

2) ತುಮಕೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ., ತುಮಕೂರು ದಲ್ಲಿರುವ ನಿಯಮ 441 ಇಲಾಖಾ ಆಡಿಟರ್ ಹುದ್ದೆಯು ಮಾರ್ಚ್ 99ರ ವರೆಗೆ ಖಾಲಿ ಇದ್ದುದರಿಂದ 96-97 ರಿಂದ 98-99ನೇ ಸಾಲುಗಳ ಆಡಿಟ್ ಬಾಕಿ ಇರುತ್ತದೆ.

3) ಮೈಸೂರು ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ., ಮೈಸೂರು ಇದರ 96-97ನೇ ಸಾಲಿನ ಲೆಕ್ಕ ಪರಿಶೋಧನೆ ಮುಕ್ತಾಯವಾಗಿದ್ದು, ವರದಿ ಬಿಡುಗಡೆಯ ಹಂತದಲ್ಲಿರುತ್ತದೆ. 97-98 ಹಾಗೂ 98-99ನೇ ಸಾಲುಗಳ ಲೆಕ್ಕ ಪರಿಶೋಧನೆಯ ಪ್ರಗತಿಯಲ್ಲರುತ್ತದೆ.

4) ಮಂಡ್ಯ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದಲ್ಲಿರುವ ನಿಯಮ 441 ಇಲಾಖಾ ಆಡಿಟರ್ ಹುದ್ದೆಯು ರಿಕ್ತವಾಗಿದ್ದು, ಹಾಗೂ ಸಂಸ್ಥೆಯವರು ಆರ್ಥಿಕ ತಃಖ್ತೆಗಳನ್ನು ಒದಗಿಸದೇ ಇರುವುದರಿಂದ 95-96 ರಿಂದ 98-99ನೇ ಸಾಲುಗಳ ಆಡಿಟ್ ಬಾಕಿ ಇರುತ್ತದೆ.

5) ಬೆಳಗಾಂ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ 97-98ನೇ ಸಾಲಿನ ಲೆಕ್ಕ ಪರಿಶೋಧನೆಯು ಮುಕ್ತಾಯ ಹಂತದಲ್ಲಿದ್ದು, 98-99ನೇ ಸಾಲಿನ ಲೆಕ್ಕಪರಿಶೋಧನೆಯು ಪ್ರಗತಿಯಲ್ಲಿರುತ್ತದೆ.

6) ಧಾರವಾಡ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ 97-98ನೇ ಸಾಲಿನ ಲೆಕ್ಕ ಪರಿಶೋಧನೆಯನ್ನು ಮಾರ್ಚಿ 2000ರ ಅಂತ್ಯದೊಳಗೆ ಮುಗಿಸುವಂತೆ ವ್ಯವಸ್ಥಿಸಲಾಗಿದೆ. 98-99ನೇ ಸಾಲಿನ ಲೆಕ್ಕ ಪರಿಶೋಧನೆಗೆ ಸಿಬ್ಬಂದಿಯನ್ನು ನಿಯೋಜಿಸಿ ಆದ್ಯತೆಯ ಮೇರೆಗೆ

ಪೂರೈಸುವಂತೆ ವ್ಯವಸ್ಥಿಸಲಾಗಿದೆ.

7) ಗುಲ್ಬರ್ಗಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ 98-99ನೇ ಸಾಲಿನ ಲೆಕ್ಕ ಪರಿಶೋಧನೆ ಮುಕ್ತಾಯವಾಗಿದ್ದು, ವರದಿ ಬಿಡುಗಡೆ ಹಂತದಲ್ಲಿ ಇರುತ್ತದೆ.

ಇ) ಬೆಂಗಳೂರು ನಗರ ಹಾಗೂ ಗ್ರಾಮಾಂತರ ಜಿಲ್ಲಾ ಸಹಕಾರ ಹಾಲು ಒಕ್ಕೂಟದ 98-99ನೇ ಸಾಲಿನ ಆಡಿಟ್ ವರದಿಯ ಆಕ್ಟೋಬರ್ 99ರಲ್ಲಿ ಒಕ್ಕೂಟಕ್ಕೆ ಬಂದಿರುವುದರಿಂದ ಮುಂದಿನ ಸರ್ವ ಸದಸ್ಯರ ಸಭೆಯ ಒಪ್ಪಿಗೆ ಪಡೆದು ಪಾವತಿಸಲಾಗುತ್ತದೆ. ಶಿವಮೊಗ್ಗ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ 97-98ನೇ ಸಾಲಿನ ಆಡಿಟ್‌ನಂತೆ ದಿ: 30-9-99 ರಂದು ಜರುಗಿದ ಒಕ್ಕೂಟದ ಸರ್ವ ಸದಸ್ಯರ ಸಭೆಯು ಡಿವಿಡೆಂಡನ್ನು ಮಾರ್ಚ್ 2000 ಮಾಹೆಯಲ್ಲಿ ಪಾವತಿಸಲು ನಿರ್ಣಯಿಸಿರುವುದರಿಂದ, ಡಿವಿಡೆಂಡ್ ಪಾವತಿಸಲು ಕ್ರಮ ಕೈಗೊಳ್ಳಲಾಗುತ್ತದೆ ಹಾಗೂ 98-99ನೇ ಸಾಲಿನ ಆಡಿಟ್ ವರದಿಯು ದಿನಾಂಕ: 19-2-2000 ರಂದು ಒಕ್ಕೂಟಕ್ಕೆ ಬಂದಿರುವುದರಿಂದ ಮುಂದಿನ ಸರ್ವ ಸದಸ್ಯರ ಸಭೆಯಲ್ಲಿ ಒಪ್ಪಿಗೆ ಪಡೆದು ಡಿವಿಡೆಂಡ್ ಪಾವತಿಸಲಾಗುತ್ತದೆ.

ರಾಯಚೂರು-ಬಳ್ಳಾರಿ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ 98-99ನೇ ಸಾಲಿನ ಆಡಿಟ್ ವರದಿಯು ದಿನಾಂಕ: 28-1-2000ರಂದು ಒಕ್ಕೂಟಕ್ಕೆ ಬಂದಿರುವುದರಿಂದ ಸರ್ವ ಸದಸ್ಯರ ಸಭೆಯು ಒಪ್ಪಿಗೆ ಪಡೆದು ಡಿವಿಡೆಂಡ್ ಪಾವತಿಸಲಾಗುತ್ತದೆ.

ಕೋಲಾರ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ 95-96ನೇ ಸಾಲಿನ ಆಡಿಟ್ ವರದಿಯು ದಿನಾಂಕ 13-12-99 ರಂದು ಒಕ್ಕೂಟವನ್ನು ಬಂದಿರುವುದರಿಂದ ಮುಂದಿನ ವರ್ಷ ಸರ್ವ ಸದಸ್ಯರ ಸಭೆಯ ಒಪ್ಪಿಗೆ ಪಡೆದು ಡಿವಿಡೆಂಡ್ ಪಾವತಿಸಲಾಗುತ್ತದೆ.

ಈ) ಮೇಲಿನ ಪ್ರಶ್ನೆ 'ಇ'ದಲ್ಲಿ ವಿವರಿಸಲಾಗಿದೆ.

ಶ್ರೀ ಜಗದೀಶ್ ಶೆಟ್ಟರ್: ಸನ್ಮಾನ್ಯ ಅಧ್ಯಕ್ಷರೇ, ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟಗಳ ಲೆಕ್ಕ ಪರಿಶೋಧನೆ ಬಗ್ಗೆ ಈ ಪ್ರಶ್ನೆ ಇರುವಂಥಾದ್ದು, ಇದರಲ್ಲಿ, ಎಲ್ಲಿಂದ ಲೆಕ್ಕ ಪರಿಶೋಧನೆ ನಡೆದಿಲ್ಲ, ಎಷ್ಟು ಸಂಘ ಸಂಸ್ಥೆಗಳಲ್ಲಿ ಅದು ನಡೆದಿಲ್ಲವೆಂಬುದು ನನ್ನ ಮೊದಲನೇ ಪ್ರಶ್ನೆ. ಮಾನ್ಯ ಸಚಿವರು ಉತ್ತರ ಕೊಟ್ಟಿರುವುದರಲ್ಲಿ ಒಟ್ಟು 13 ಸಹಕಾರಿ ಹಾಲು ಉತ್ಪಾದಕ ಸಂಘಗಳಲ್ಲಿ 6 ಸಹಕಾರ ಸಂಘಗಳ ಲೆಕ್ಕ ಪರಿಶೋಧನೆ 1998-99ರವರೆಗೆ ಆಗಿದೆ ಎಂಬುದನ್ನು ಹೇಳಿದ್ದಾರೆ. ಇನ್ನೂ 7 ಸಹಕಾರಿ ಹಾಲು ಉತ್ಪಾದಕರ ಸಂಘಗಳ ಲೆಕ್ಕಪರಿಶೋಧನೆ ಆಗಿಲ್ಲವೆಂಬ

ಉತ್ತರ ಬಂದಿದೆ. ಉತ್ತರದಲ್ಲಿ ಅದು ಏಕೆ ಆಗಿಲ್ಲವೆಂಬುದಕ್ಕೆ ಕಾರಣವನ್ನೂ ಕೊಟ್ಟಿದ್ದಾರೆ. ಕೋಲಾರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘದ್ದು ಆಡಿಟರ್ ಹುದ್ದೆ ಮಾರ್ಚ್ 1999 ರಿಂದ ಖಾಲಿ ಇದ್ದುದರಿಂದ ಲೆಕ್ಕಪರಿಶೋಧನೆ ಆಗಿಲ್ಲವೆಂಬುದು ಒಂದು. ಇನ್ನೊಂದು ತುಮಕೂರು ಜಿಲ್ಲಾ ಹಾಲು ಉತ್ಪಾದಕರ ಒಕ್ಕೂಟದಲ್ಲೂ ಆಡಿಟರ್ ಹುದ್ದೆ ಖಾಲಿ ಇದೆ, ಅದರ ಸಲುವಾಗಿ ಆಗಿಲ್ಲ ಎನ್ನುವಂಥಾದ್ದು. ಇನ್ನೊಂದು ಮಂಡ್ಯ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘದ್ದು, ಆಡಿಟರ್ ಹುದ್ದೆಯು ರಿಕ್ತವಾಗಿದ್ದು, ಮತ್ತು ಸಂಸ್ಥೆಯವರು ಆರ್ಥಿಕ ತಃಖ್ತೆಗಳನ್ನು ಒದಗಿಸದೇ ಇರುವುದರಿಂದ 1995-96 ರಿಂದ 1998-99ರವರೆಗೆ ಆಡಿಟ್ ಆಗಿಲ್ಲ ಎನ್ನುವಂಥಾದ್ದು, ಈ ಕಾರಣವನ್ನು ಅವರು ಹೇಳಿದ್ದಾರೆ. ಪ್ರತಿ ವರ್ಷ ಆಡಿಟ್ ಆಗುವಂಥಾದ್ದು ಅವಶ್ಯ ಇದೆ. ಈ ಆಡಿಟರ್ ಹುದ್ದೆ ಖಾಲಿ ಇದೆ ಎಂಬುದಲ್ಲ. ಹಿಂದೆ ಮಾನ್ಯ ಸಿ.ಎಂ.ಲಿಂಗಪ್ಪನವರು 1997ನೇ ಇಸವಿಯಲ್ಲಿ ಈ ಪ್ರಶ್ನೆ ಕೇಳಿದಾಗ, ಆಗಲೂ ಕೂಡ ಇದೇ ರೀತಿಯ ಉತ್ತರ ಬಂದಿತ್ತು. ಕೆಲವೊಂದು ಸಹಕಾರ ಸಂಘಗಳ ಆಡಿಟರ್ ಹುದ್ದೆ ಖಾಲಿ ಇವೆ, ತುಂಬಲಿಲ್ಲವೆಂದು ಹೇಳಿದ್ದರು. ಈ ಕಾರಣದ ಮೇಲೆ ಆಡಿಟ್ ಆಗುವುದು ನಿಲ್ಲುವುದು ಬೇಡ. ಏಕೆಂದರೆ, ಇಲ್ಲಿ ಅವ್ಯವಹಾರವಾಗುವಂಥಾದ್ದು ಹಲವಾರು ಅನುಮಾನಗಳು ಇರುವಂಥಾದ್ದು ಇರುವುದರಿಂದ ಸಾರ್ವಜನಿಕರಿಂದ ಅಪಾದನೆಗಳು ಬರುತ್ತಿರುವದರಿಂದ ಮತ್ತು ಸಾಕಷ್ಟು ಅವ್ಯವಹಾರಗಳು ಆಗುತ್ತಿರುವುದರಿಂದ ಪ್ರತಿ ವರ್ಷ ಆಡಿಟ್ ಆಗುವುದು ಅವಶ್ಯಕತೆ ಇದೆ. ಅದರ ಸಲುವಾಗಿ ತಾವೇನು ವ್ಯವಸ್ಥೆ ಮಾಡುತ್ತೀರಿ? ಪ್ರತಿ ವರ್ಷ ಯಾವುದೇ ರೀತಿಯಿಂದಲಾದರೂ ತಪ್ಪದೇ ಆಡಿಟ್ ಆಗಬೇಕು. ಮತ್ತು ಇಲ್ಲಿ ಮಂಡ್ಯ ಜಿಲ್ಲಾ ಸಹಕಾರಿ ಹಾಲು ಉತ್ಪಾದಕ ಸಂಘದ ಬಗ್ಗೆ ಕೆಲವೊಂದು ಕಾಗದ ಪತ್ರಗಳನ್ನು ಅವರು ಕೊಟ್ಟಿಲ್ಲವೆಂದು ಹೇಳಿದ್ದೀರಿ. ಅಂತಹವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? 1995-96ನೇ ಸಾಲಿನಿಂದ ಅವರು ಕೊಟ್ಟೇ ಇಲ್ಲ. ಇದನ್ನು ಹಾಗೆಯೇ ಬಿಡಲಿಕ್ಕೆ ಸಾಧ್ಯವೇ? ಹೇಗೆ? ಇದರ ಬಗ್ಗೆ ದಯವಿಟ್ಟು ಸ್ಪಷ್ಟವಾದ ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ಕೆ.ಶಿವಕುಮಾರ್: ಮಾನ್ಯ ಅಧ್ಯಕ್ಷರೇ, ಗೌರವಾನ್ವಿತ ವಿರೋಧಪಕ್ಷದ ನಾಯಕರು ನಾವು ಕೆಲವು ವಿಚಾರಗಳನ್ನು ನಮ್ಮ ಉತ್ತರದಲ್ಲಿಯೇ ಒಪ್ಪಿಕೊಂಡಿದ್ದೇವೆ ನಮ್ಮಿಂದ ಏನು ತಪ್ಪಾಗಿದೆ ಅಂತ ಹೇಳಿದ್ದಾರೆ. ಮಂಡ್ಯದಲ್ಲಿ ಅವರು ಕೆಲವು ಡಾಕ್ಯುಮೆಂಟ್ಸ್ ಕೊಟ್ಟಿಲ್ಲ ಎನ್ನತಕ್ಕಂಥ ವಿಚಾರವನ್ನು ಸಹ ನಾವು ಹೇಳಿದ್ದೇವೆ. ನಾವು ಈಗಾಗಲೇ ಅವರ ಮೇಲೆ ಯಾವ ರೀತಿಯ ಕ್ರಮ ತೆಗೆದುಕೊಳ್ಳಬೇಕೋ ಆ ಕ್ರಮ ತೆಗೆದುಕೊಳ್ಳುವ ವ್ಯವಸ್ಥೆ ಮಾಡಿದ್ದೇವೆ. ನಮ್ಮಲ್ಲಿ ಸುಮಾರು 200-250 ಆಡಿಟರ್ ಹುದ್ದೆಗಳು ಖಾಲಿ ಇವೆ. ಈ ಹುದ್ದೆಗಳು ಬಹಳ ವರ್ಷಗಳಿಂದ ಉಳಿದುಕೊಂಡು ಬಂದಿದೆ. ಈ ಹುದ್ದೆಗಳನ್ನು ಏನಾದರೂ ಮಾಡಿ ಈ ವರ್ಷ ತುಂಬಬೇಕು ಎನ್ನುವಂತಹ ಕಾರ್ಯಕ್ರಮವನ್ನು ನಾವು ಹಾಕಿಕೊಂಡಿದ್ದೇವೆ. ಈ ವರ್ಷದಲ್ಲಿಯೇ ನಾವು ಈ

ಆಡಿಟರ್ ಪೋಸ್ಟ್‌ಗಳನ್ನು ತುಂಬಿ ಆದಷ್ಟು ಬೇಗ ಆಡಿಟ್ ಮಾಡಿಸುವಂತಹ ವ್ಯವಸ್ಥೆಯನ್ನು ಖಂಡಿತ ಮಾಡುತ್ತೇವೆ.

ಶ್ರೀ ಜಗದೀಶ ಶೆಟ್ಟರ್: ಮಾನ್ಯ ಅಧ್ಯಕ್ಷರೇ, ಒಂದು ವೇಳೆ ಸರ್ಕಾರದಿಂದ ಆಡಿಟರ್ಸ್‌ನ್ನು ತುಂಬಲಿಕ್ಕೆ ಆಗದಿದ್ದರೆ ತಾವು ಚಾರ್ಟರ್ಡ್ ಅಕೌಂಟೆಂಟ್ಸ್‌ನ್ನು ನೇಮಕ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟರೆ ಆಗ ಆಡಿಟ್ ಸರಿಯಾಗಿ ನಡೆಯುತ್ತದೆ. ಮತ್ತು ಸಂಘದ ಸದಸ್ಯರಿಗೆ ಡಿವಿಡೆಂಡ್ ಕೊಡುವುದರಲ್ಲಿ ಏರುಪೇರುಗಳು ಆಗಿದೆ. ಆದ್ದರಿಂದ, ಪ್ರತಿ ವರ್ಷ ಸಂಘದ ಸದಸ್ಯರಿಗೆ ಡಿವಿಡೆಂಡ್ ಕೊಡುವಂತಹ ವ್ಯವಸ್ಥೆ ಆಗಬೇಕು.

ಶ್ರೀ ಡಿ.ಕೆ.ಶಿವಕುಮಾರ್: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ಹಾಗೆ ಕಾಲ ಕಾಲಕ್ಕೆ ಅವರಿಗೆ ಏನು ಡಿವಿಡೆಂಡ್ ಕೊಡಬೇಕೋ ಅದನ್ನು ಕೊಡಿಸುವ ವ್ಯವಸ್ಥೆ ಮಾಡುತ್ತೇನೆ. ಎರಡನೆಯದಾಗಿ, ತಾವು ಚಾರ್ಟರ್ಡ್ ಅಕೌಂಟೆಂಟ್ಸ್ ನೇಮಕ ಮಾಡಿಕೊಳ್ಳುವ ಬಗ್ಗೆ ಏನು ಪ್ರಸ್ತಾಪ ಮಾಡಿದಿರಿ, ಆ ವಿಚಾರ ಕೂಡ ಸರ್ಕಾರದ ಪರಿಶೀಲನೆಯಲ್ಲಿದೆ. ಮಾನ್ಯ ಎಸ್.ಎಸ್.ಪಾಟೀಲರ ಕಾಲದಲ್ಲಿ ಚಾರ್ಟರ್ಡ್ ಅಕೌಂಟೆಂಟ್ಸ್ ನೇಮಕ ಮಾಡಿಕೊಳ್ಳುವುದಕ್ಕೆ ಕಾನೂನಿನಲ್ಲಿ ಅವಕಾಶ ಮಾಡಿ ಕೊಟ್ಟಿದ್ದಾರೆ. ನಾವು ಕೆಲವು ಮಿಲ್ಕ್ ಯೂನಿಯನ್‌ಗಳಲ್ಲಿ ಪ್ರೈವೇಟ್ ಆಡಿಟರ್ಸ್‌ನ್ನು ಅಪಾಯಿಂಟ್ ಮಾಡಿಕೊಂಡು ಆಡಿಟ್ ಮಾಡಿಸಿಕೊಳ್ಳುವುದಕ್ಕೆ ಅವಕಾಶ ಕೊಟ್ಟಿದ್ದೇವೆ. ನಮಗೆ ಎಲ್ಲಿ ತೊಂದರೆಯಾಗುತ್ತಿದೆ ಅಲ್ಲಿ ಅದರ ಬಗ್ಗೆ ಖಂಡಿತವಾಗಿ ನಾವು ಪರಿಶೀಲನೆ ಮಾಡುತ್ತೇವೆ.

ರಾಜ್ಯದಲ್ಲಿ ರೈತರಿಗೆ ನೀಡಲಾದ ಕೃಷಿ ಪಾಸ್‌ಪುಸ್ತಕಗಳ ಕುರಿತು.

62(105)

ಶ್ರೀ ಎ.ಎಸ್.ಗುರುಸ್ವಾಮಿ(ಚಾಮುಂಡೇಶ್ವರಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ರಾಜ್ಯದಲ್ಲಿ ರೈತರಿಗೆ ಇದುವರೆವಿಗೂ ನೀಡಿರುವ ಒಟ್ಟು ಕೃಷಿ ಪಾಸ್ ಪುಸ್ತಕಗಳ ಸಂಖ್ಯೆ ಎಷ್ಟು, ತಾಲ್ಲೂಕುವಾರು ಮಾಹಿತಿ ನೀಡುವುದು,

2. ರೈತರಿಗೆ ಕೃಷಿ ಪಾಸ್ ಪುಸ್ತಕಗಳನ್ನು ವಿತರಿಸಲು ಬಾಕಿ ಇರುವ ಒಟ್ಟು ಸಂಖ್ಯೆ ಎಷ್ಟು,

3. ಸದರಿ ಪುಸ್ತಕಗಳನ್ನು ವಿತರಿಸುವಲ್ಲಿ ಉಂಟಾದ ವಿಳಂಬಕ್ಕೆ ಕಾರಣಗಳೇನು,